ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಬೆಂಗಳೂರು-560 001.
ದಿನಾಂಕ: 31-01-2022

ಸಂ: **DTE-ADMI0SCH/1/2022** /2127

ಇವರಿಗೆ,

**Principal** ,
Adichunchanagiri Institute of Technology
P.B.No.91, Jyothinagar
Chikmagalur - 577 101

ಅತಿ ಜರೂರು

ಮಾನ್ಯರೇ,

**ವಿಷಯ :** 2021-22ನೇ ಸಾಲಿಗೆ ವಿವಿಧ ವೃತ್ತಿಪರ ಕೋರ್ಸುಗಳಲ್ಲಿ 2ನೇ, 3ನೇ, 4ನೇ ಮತ್ತು 5ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶುಲ್ಕ ಉಚಿತ (**ಪ್ರತಿಭಾ ಪುರಸ್ಕಾರ**) ನೀಡುವ ಬಗ್ಗೆ.

-oooooooo-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದ್ವಿತೀಯ ಪಿ.ಯು.ಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿ, ಬಡತನ ರೇಖೆಗಿಂತ ಕೆಳಮಟ್ಟದ ಕುಟುಂಬದಿಂದ ಬಂದಂತಹ (ಬಿ.ಪಿ.ಎಲ್ ಕಾರ್ಡ್ ಹೊಂದಿರುವ) ವಿದ್ಯಾರ್ಥಿಗಳು ಸಿ.ಇ.ಟಿ ಮುಖಾಂತರ ವಿವಿಧ ವೃತ್ತಿಪರ ಕೋರ್ಸುಗಳಾದ ಬಿ.ಇ, ಬಿ.ಟೆಕ್, ಬಿ.ಆರ್ಕ್, ವೈದ್ಯಕೀಯ, ದಂತ ವೈದ್ಯಕೀಯ, ಕೃಷಿ ವಿಜ್ಞಾನ, ಪಶು ವೈದ್ಯಕೀಯ ಹಾಗೂ ಆಯುರ್ವೇದಿಕ್ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಿಗೆ ಪ್ರವೇಶಾತಿ ಪಡೆದವರಿಗೆ ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅದರಂತೆ ತಮ್ಮ ಸಂಸ್ಥೆಯಲ್ಲಿ ಈ ಕೆಳಗಿನ ತಃಖ್ತೆಯಲ್ಲಿ ನಮೂದಿಸಿರುವ ವಿದ್ಯಾರ್ಥಿಗಳಿಗೆ 2021-22ನೇ ಸಾಲಿಗೆ ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) ಯೋಜನೆಯಡಿ ಅರ್ಹರಾಗಿ, ವ್ಯಾಸಂಗ ಪೂರ್ಣಗೊಳ್ಳುವವರೆಗೆ ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) ಯೋಜನೆಯನ್ನು ವಿಸ್ತರಿಸಬೇಕಾಗಿರುವುದರಿಂದ ವಿದ್ಯಾರ್ಥಿಗಳು 2ನೇ, 3ನೇ, 4ನೇ ಮತ್ತು 5ನೇ ವರ್ಷಕ್ಕೆ ಅರ್ಹತೆ ಪಡೆದು, ಪ್ರವೇಶ ಪಡೆದಿರುವ ಮಾಹಿತಿಯನ್ನು ಅಗತ್ಯ ದಾಖಲೆಗಳೊಂದಿಗೆ ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿ ಪ್ರಸ್ತಾವನೆಗಳನೂ ಇಲಾಖೆಗೆ ಸಲ್ಲಿಸುವುದು. 5, 6,

1. **ವಿದ್ಯಾರ್ಥಿಯು ಹಿಂದಿನ ಶೈಕ್ಷಣಿಕ ಸಾಲಿನ ತರಗತಿಗಳಲ್ಲಿ ಉತ್ತೀರ್ಣರಾಗಿ ಮುಂದಿನ ತರಗತಿಗೆ ಅರ್ಹರಿರಬೇಕು. ಒಂದು ವೇಳೆ ಈ ವರ್ಷದಲ್ಲಿ ಅನರ್ಹರಾದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಹಿಂದಿನ ಸಾಲಿನಲ್ಲಿ ಉತ್ತೀರ್ಣರಾದ ಅಂಕ ಪಟ್ಟಿಗಳ ನಕಲು ಪ್ರತಿಯನ್ನು ಸಲ್ಲಿಸುವುದು.**
2. **ವಿದ್ಯಾರ್ಥಿಯು ತಮ್ಮ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಸುವುದು, ಜೋಡಣೆ ಮಾಡಿಸಿರುವ ಪ್ರತಿ ಮತ್ತು ಆಧಾರ್ ನಕಲು ಪ್ರತಿಯನ್ನು ಸಲ್ಲಿಸುವುದು. (Students should compulsory link/NPCI-Seed there Aadhaar card number to their respective bank account)**
3. ವಿದ್ಯಾರ್ಥಿಯು ಹೊಂದಿರುವ ರಾಷ್ಟ್ರೀಕೃತ ಬ್ಯಾಂಕಿನ Savings Account No., I.F.S.C Code ಮತ್ತು ಇತ್ತೀಚಿನ ವ್ಯವಹಾರದ (Transaction) ಮಾಹಿತಿವುಳ ಬ್ಯಾಂಕ್ ಪಾಸ್ ಪುಸ್ತಕದ ನಕಲು ಪ್ರತಿಗಳು ಸಲ್ಲಿಸುವುದು (Nationalized Active Major Account & Bank Statement).

(1) M.C card
(2) A. card.
(3) Pass Book
(4) Bonafied certificate, E, BPL card

4. ವಿದ್ಯಾರ್ಥಿಯ ವ್ಯಾಸಂಗ ಪ್ರಮಾಣ ಪತ್ರ (Bonafide certificate) ಮತ್ತು ಕುಟುಂಬದ ಬಿ.ಪಿ.ಎಲ್ ಕಾರ್ಡ್‌ನ ನಕಲು ಪ್ರತಿ ಸಲ್ಲಿಸುವುದು.

5. ಪ್ರತಿಯೊಬ್ಬ ಅರ್ಹ ವಿದ್ಯಾರ್ಥಿಯು ಸರ್ಕಾರದ ಯಾವುದಾದರೂ ಒಂದು ಆರ್ಥಿಕ ಸೌಲಭ್ಯವನ್ನು ಮಾತ್ರ ಪಡೆಯಲು ಅರ್ಹತೆ ಪಡೆದಿರುತ್ತಾರೆ. ಅದರಂತೆ **ವಿದ್ಯಾರ್ಥಿಗಳು 2021-22ನೇ ಸಾಲಿನಲ್ಲಿ ಈ ಸೌಲಭ್ಯ ಪಡೆಯಲು ವಿವರಗಳು ಸಲ್ಲಿಸಿದಲ್ಲಿ, ಬೇರೆ ಯಾವುದೇ ವಿದ್ಯಾರ್ಥಿವೇತನಕ್ಕೆ ಅರ್ಹರಿರುವುದಿಲ್ಲ**. ಒಂದು ಯೋಜನೆಯ ಸೌಲಭ್ಯಕ್ಕೆ ಅರ್ಹತೆ ಪಡೆಯ ಮತ್ತೊಂದು ಸೌಲಭ್ಯಕ್ಕೆ ಅರ್ಜಿಯನ್ನು ಸಲ್ಲಿಸದಂತೆ ಸಂಸ್ಥೆಯವರು ಗಮನ ಹರಿಸಬೇಕಾಗಿರುತ್ತದೆ.

6. ಈ ಕೆಳಗೆ ನಮೂದಿಸಿರುವ ತಃಖ್ತೆಯಲ್ಲಿ ತಿಳಿಸಿರುವಂತೆ ಮಾಹಿತಿ ಭರ್ತಿ ಮಾಡಿ, ಅರ್ಹ ವಿದ್ಯಾರ್ಥಿಗಳು ಸಲ್ಲಿಸುವ ಕ್ರ.ಸಂ 01 ರಿಂದ 04ಕ್ಕೆ ಸಂಬಂಧಿಸಿದ ಜೆರಾಕ್ಸ್ ಪ್ರತಿಗಳನ್ನು ಪತ್ರಾಂಕಿತ ಅಧಿಕಾರಿ (Gazetted officer) ರವರಿಂದ ದೃಢೀಕರಿಸಿ. ಸಂಸ್ಥೆಯ ಪತ್ರದೊಂದಿಗೆ (Covering letter) **ದಿನಾಂಕ: 15-02-2022ರ ಒಳಗೆ ಈ ಕಛೇರಿಗೆ ನೀಡುವುದು.**

**ವಿದ್ಯಾರ್ಥಿಗಳ ವಿವರಗಳನ್ನು ಸಲ್ಲಿಸದೆ, ವಿದ್ಯಾರ್ಥಿಗಳು ಈ ಯೋಜನೆಯ ಸೌಲಭ್ಯದಿಂದ ವಂಚಿತರಾದಲ್ಲಿ, ಪ್ರಾಂಶುಪಾಲರೇ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಿದೆ.**

| Sl. No. | Students Name/ Mobile No. | Course / Year | Aadhaar No. | Ration Card No. | Bank Name & Branch | Saving Account No. | I.F.S.C Code | Whether student is eligible (Yes or No) |
|---|---|---|---|---|---|---|---|---|
| 1. | Likhith H D | 2nd Yr EC | - 9019681295 9448936322 | - | - | - | - | |
| 2. | AKASHK G | 4th Yr CE | - 9538051969 — 18CV006 | - | - | - | - | |
| 3. | HARSHA K P | 4th Yr CSE | - 9483075150 | - | - | - | - | |
| 4. | MANJUNATHA C C | 4th Yr CE | - 6361669992 7676694899 | - | - | - | - | |
| 5. | SHRIVATHSA B V | 4th Yr CSE | - 9449774823 | - | - | - | - | |

ತಮ್ಮ ವಿಶ್ವಾಸಿ

ಸಹಾಯಕ ನಿರ್ದೇಶಕರು(ಎಂಪಿಸಿ)